E - SANJAY 29.07.2010

ಗುರುವಾರ, ಜುಲೈ 29, 2010 ಈ ಸಂಜೆ 7



ಬೆಂಗಳೂರು ವಿಶ್ವವಿದ್ಯಾಲಯ ಆಯೋಜಿಸಿದ್ದ ಪರಿಸರ, ನೀರು ಮತ್ತು ಆರೋಗ್ಯ ಸಂರಕ್ಷಣೆ ಕುರಿತ ಅಂತಾರಾಷ್ಟ್ರೀಯ ಸಮಾವೇಶದಲ್ಲಿ ಸಚಿವ ಅರವಿಂದ ಲಿಂಬಾವಳಿ, ಕುಲಪತಿ ಡಾ.ಎನ್.ಪ್ರಭು ದೇವ್, ಕೃಷಿ ವಿವಿ ಕುಲಪತಿ ಡಾ.ಕೆ.ವಿ.ದೇವರಾಜ್, ಡಾ.ಎಂ.ರಾಮಚಂದ್ರಮೋಹನ್, ರಿಜಿಸ್ಟ್ರಾರ್ ಡಾ.ಆರ್.ಎಂ.ರಂಗನಾಥ್ ಉಪಸ್ಥಿತರಿದ್ದರು.

# ವಿವಿ ಪಠ್ಯಕ್ರಮ ಬದಲಾವಣೆ ಚಿಂತನೆ

ಬೆಂಗಳೂರು, ಜು.29-ವಿಶ್ವವಿದ್ಯಾಲಯಗಳ ಪಠ್ಯಕ್ರಮಗಳ ಬದಲಾವಣೆ ಕುರಿತು ಚಿಂತನೆ ನಡೆಸಲಾಗಿದೆ ಎಂದು ಉನ್ನತ ಶಿಕ್ಷಣ ಸಚಿವ ಅರವಿಂದ ಲಿಂಬಾವಳಿ ಇಂದಿಲ್ಲಿ ಹೇಳಿದರು.

ಬೆಂಗಳೂರು ವಿಶ್ವವಿದ್ಯಾಲಯ ಆಯೋಜಿಸಿದ್ದ ಪರಿಸರ, ನೀರು ಮತ್ತು ಆರೋಗ್ಯ ಸಂರಕ್ಷಣೆ ಕುರಿತ ಅಂತಾರಾಷ್ಟ್ರೀಯ ಸಮಾವೇಶದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಬೆಂಗಳೂರು ವಿವಿ ಪಠ್ಯಕ್ರಮ ಬದಲಾವಣೆ ಚಿಂತನೆ ನಡೆಸಿದೆ. ಈ ಸಮಾವೇಶದಲ್ಲಿ ಉಪಯುಕ್ತ ಸಲಹೆಗಳು ಬಂದರೆ ಅದನ್ನು ಸ್ವೀಕರಿಸುವುದಾಗಿ ಹೇಳಿದರು.

ಮೌಲ್ಯವನ್ನರಿತು ನೀರು ಉಪಯೋಗಿಸಬೇಕು. ಆರೋಗ್ಯ ರಕ್ಷಣೆ ಮಾಡಬೇಕು. ನಾವೇ ನೂರೆಂಟು ಸಮಸ್ಯೆಗಳನ್ನು ಸೃಷ್ಟಿ ಮಾಡಿಕೊಳ್ಳುತ್ತಿದ್ದೇವೆ ಎಂಬ ಆತಂಕ ವ್ಯಕ್ತಪಡಿಸಿದರು. ನಗರದಲ್ಲಿ ಈಗಿರುವ ಬಡಾವಣೆಗಳಿಗೆ ಸರಿಯಾಗಿ ನೀರು ಪೂರೈಕೆ ಆಗುತ್ತಿಲ್ಲ, ಹೊಸ ಬಡಾವಣೆಗಳಿಗೆ ನೀರು ಪೂರೈಕೆ ಮಾಡುವುದಿಲ್ಲ ಎಂದು ಜಲ ಮಂಡಳಿ ಹೇಳಿದೆ. ಪರಿಸ್ಥಿತಿ ಈಗಿರುವಾಗ ಜಲ ರಕ್ಷಣೆಗೆ ನಾವು ಗಂಭೀರ ಚಿಂತನೆ ಮಾಡುವ ಅಗತ್ಯತೆ ಇದೆ ಎಂದು ತಿಳಿಸಿದರು. ಬೆಂಗಳೂರು ವಿವಿ ಆವರಣದಲ್ಲಿ ಮತ್ತಷ್ಟು ಗಿಡ ನೆಡುವ ಮೂಲಕ ಪರಿಸರಕ್ಕೆ ಹೆಚ್ಚು ಒತ್ತು ನೀಡಲಾಗುವುದು. ವಿವಿ ಕುಲಪತಿ ಡಾ.ಎನ್. ಪ್ರಭುದೇವ್ ಮಾತನಾಡಿ, ಲಕ್ಷವೃಕ್ಷಯೋಜನೆಯಡಿ ಬೆಂಗಳೂರು ವಿವಿ ಆವರಣದಲ್ಲಿ ಗಿಡಗಳನ್ನು ನೆಡಲಾಗುವುದು. ಇದಕ್ಕೆ ರೋಟರಿ, ಲಯನ್ಸ್ ಎನ್‌ಜಿಓಗಳ ಸಹಕಾರ ಪಡೆಯಲಾಗುವುದು ಎಂದು ತಿಳಿಸಿದರು.

SANJAYVANI 29.07.2010

ಗುರುವಾರ 29 ಜುಲೈ 2010 ಸಂಜೆವಾಣಿ



ಸೆಂಟ್ರಲ್ ಕಾಲೇಜಿನ ಜ್ಞಾನಜ್ಯೋತಿ ಸಭಾಂಗಣದಲ್ಲಿಂದು ಪರಿಸರ ಮಾನ್ಯ, ಜಲಸಂರಕ್ಷಣೆ ಹಾಗೂ ಆರೋಗ್ಯ ಕುರಿತ ಆರಂಭವಾದ ಮೂರು ದಿನಗಳ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಉನ್ನತ ಶಿಕ್ಷಣ ಸಚಿವ ಅರವಿಂದ ಲಿಂಬಾವಳಿ ಅಂಚೆಚೀಟಿಯನ್ನು ಬಿಡುಗಡೆಗೊಳಿಸಿದರು. ಬೆಂಗಳೂರು ವಿಶ್ವವಿದ್ಯಾನಿಲಯದ ಕುಲಪತಿ ಡಾ.ಎಲ್. ಪ್ರಭುದೇವ್, ಕೃಷಿವಿಶ್ವವಿದ್ಯಾನಿಲಯದ ನಿವೃತ್ತ ಕುಲಪತಿ ಡಾ.ಕೆ.ವಿ. ದೇವರಾಜ್ ಇದ್ದಾರೆ.

KANNADA PRABHA 30.07.2010

ಶುಕ್ರವಾರ, 30 ಜುಲೈ 2010 ಕನ್ನಡಪ್ರಭ, ಬೆಂಗಳೂರು




**ಸಮ್ಮೇಳನ..**

ನಗರದ ಜ್ಞಾನಭಾರತಿ ಆಡಿಟೋರಿಯಂನಲ್ಲಿ ಗುರುವಾರ ನಡೆದ ಪರಿಸರ ಮಾಲಿನ್ಯ, ಜಲಸಂರಕ್ಷಣೆ ಮತ್ತು ಆರೋಗ್ಯ ಕುರಿತ ಅಂತಾರಾಷ್ಟ್ರೀಯ ಸಮ್ಮೇಳನವನ್ನು ಉನ್ನತ ಶಿಕ್ಷಣ ಸಚಿವ ಅರವಿಂದ ಲಿಂಬಾವಳಿ ಉದ್ಘಾಟಿಸಿದರು. ಬೆಂವಿವಿ ಕುಲಪತಿ ಡಾ.ಎನ್.ಪ್ರಭುದೇವ್, ಡಾ.ದೇವರಾಜ್ ಇದ್ದರು.

ENADU KARNATAKA 30.07.2010

ఈనాడు కర్ణాటక శుక్రవారం 30 జులై 2010

# వర్శిటీల పాఠ్యాంశాలు మారుస్తాం: లింబావళి




పర్యావరణ సంరక్షణ పుస్తకాన్ని ఆవిష్కరిస్తున్న మంత్రి లింబావలి తదితరులు

బెంగళూరు, జులై 29 (న్యూస్‌టుడే): విశ్వవిద్యాలయాల పాఠ్యాంశాలను మార్చాలనే ఆలోచన ఉన్నట్లు ఉన్నత విద్యాశాఖ మంత్రి అరవిందలింబావళి తెలిపారు. గురువారం ఇక్కడ బెంగళూరు విశ్వవిద్యాలయం పరిసరాలు, నీరు, ఆరోగ్యం అనే అంశాలపై ఏర్పాటు చేసిన అంతర్జాతీయ సదస్సును మంత్రి ప్రారంభించి మాట్లాడారు. విద్యావేత్తలు అందుకు సంబంధించిన సూచనలు సలహాలను ఇవ్వాలని కోరారు. వాననీటి సంరక్షణ అత్యవసరం. ఆరోగ్య రక్షణపై దృష్టి పెట్టాల్సిన అవసరం ఉందన్నారు. అనేక సమస్యలు, వ్యాధుల్ని మనిషి సృష్టిస్తున్నట్లు తెలిపారు. నగరంలోని లేఔట్లకు తాగునీరు సరఫరా కష్టంగా ఉంది, కొత్త వాటికి నీరు సరఫరా చేయబోమని బెంగళూరు జలమండలి వెల్లడించినా కొత్త లేఔట్లు పుట్టుకువస్తోన్నట్లు ఆందోళన వ్యక్తం చేశారు. నీటి సంరక్షణపై ఆలోచించాల్సిన అవసరం ఉందన్నారు. బెంగళూరు విశ్వవిద్యాలయం ఆవరణలో మరిన్ని మొక్కల్ని నాటి పరిసరాలను కాపాడతామని చెప్పారు. కార్యక్రమంలో ఉపకులపతి డాక్టర్ ప్రభుదేవ్ తదితరులు పాల్గొన్నారు.

VIJAYA KARNATAKA 30.07.2010



C

# ಪರಿಸರಸ್ನೇಹಿ ವಿವಿ: ಪಠ್ಯ ತಿದ್ದುಪಡಿಗೆ ಚಿಂತನೆ

ವಿಕ ಸುದ್ದಿಲೋಕ ಬೆಂಗಳೂರು

ರಾಜ್ಯದ ವಿಶ್ವವಿದ್ಯಾಲಯಗಳನ್ನು ಪರಿಸರ ಸ್ನೇಹಿಯಾಗಿ ರೂಪಿಸಲು ಪಠ್ಯಕ್ರಮದಲ್ಲಿ ಸೂಕ್ತ ತಿದ್ದುಪಡಿ ತರಲು ಚಿಂತನೆ ಮಾಡಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಅರವಿಂದ ಲಿಂಬಾವಳಿ ಅಭಿಪ್ರಾಯಪಟ್ಟಿದ್ದಾರೆ.

ಬೆಂಗಳೂರು ವಿವಿ ಪ್ರಾಣಿಶಾಸ್ತ್ರ ವಿಭಾಗದ ಶತಮಾನೋತ್ಸವದ ನಿಮಿತ್ತ ಸೆಂಟ್ರಲ್ ಕಾಲೇಜಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ಆಯೋಜಿಸಿರುವ 'ಪರಿಸರ ಮಾಲಿನ್ಯ ನಿಯಂತ್ರಣ, ಜಲ ಸಂರಕ್ಷಣೆ ಹಾಗೂ ಆರೋಗ್ಯ ಸುಧಾರಣೆ' ಕುರಿತ ಅಂತಾರಾಷ್ಟ್ರೀಯ ಸಮ್ಮೇಳನ ಉದ್ಘಾಟಿಸಿ ಗುರುವಾರ ಮಾತನಾಡಿದರು. ಸಮ್ಮೇಳನದಲ್ಲಿ ಪ್ರಮುಖವಾಗಿ ಚರ್ಚೆಯಾಗುವ ಅಂಶಗಳನ್ನು ಗಮನಿಸಿ, ಪಠ್ಯದಲ್ಲಿ ಅಳವಡಿಸಲು ಯೋಚಿಸ ಲಾಗುವುದು. ವಿವಿಗಳಲ್ಲಿ ಪಠ್ಯಕ್ರಮ ಪರಿಷ್ಕರಣೆ ನಡೆಯು ತ್ತದೆ. ಆ ಸಂದರ್ಭದಲ್ಲಿ ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಪರಿಸರ ಹಾಗೂ ಜಲ ಸಂರಕ್ಷಣೆ ವಿಷಯದಲ್ಲಿ ಮಂಥನ ಮಾಡುತ್ತಿರುವುದು ಉತ್ತಮ ಹೆಜ್ಜೆ. ಈ ಸಂಗತಿ ಪಾಠದಲ್ಲಿ ಇಲ್ಲ, ಆದರೆ, ವಿವಿಯೊಂದು ಗಂಭೀರ ಚಿಂತನೆ ಮಾಡುತ್ತಿರುವುದು ಶ್ಲಾಘನೀಯ. ಈ ಕುರಿತು ಇನ್ನಷ್ಟು ಅರಿವು ಮೂಡಿಸಬೇಕು ಎಂದು ಸಲಹೆ ಮಾಡಿದರು.

**ನೀರು ಕೊಡೋದು ಸವಾಲು:** ಬೆಂಗಳೂರಿನಲ್ಲಿ ನೀರಿನ ಸಮಸ್ಯೆ ಕಾಡುತ್ತಿದೆ. ಹೊಸದಾಗಿ ನೀರಿನ ಸಂಪರ್ಕ ಕೊಡಲು ಸಾಧ್ಯವಿಲ್ಲ ಎಂದು ಜಲಮಂಡಳಿ ಹೇಳುತ್ತಿದೆ. ನಾನು ಪ್ರತಿನಿಧಿಸುವ ಮಹದೇವಪುರ ಕ್ಷೇತ್ರದ ಜನರೂ ದಿನ ಬೆಳಗಾದರೆ ನೀರು ಕೊಡಿ. ಕೊಳವೆ ಬಾವಿ ಕೊರೆಸಿ ಕೊಡಿ ಎಂದು ಕೇಳುತ್ತಾರೆ. ಹೀಗಾಗಿ, ನೀರಿನ ನಿರ್ವಹಣೆ ದೊಡ್ಡ ಸವಾಲಾಗಿದೆ ಎಂದರು.




ಬೆಂಗಳೂರು ವಿವಿಯ ಪ್ರಾಣಿಶಾಸ್ತ್ರ ವಿಭಾಗದ ಶತಮಾನೋತ್ಸವದ ನಿಮಿತ್ತ ಆಯೋಜಿಸಿರುವ ಪರಿಸರ, ಜಲ ಸಂರಕ್ಷಣೆ ಕುರಿತ ಅಂತಾರಾಷ್ಟ್ರೀಯ ಸಮ್ಮೇಳನವನ್ನು ಉನ್ನತ ಶಿಕ್ಷಣ ಸಚಿವ ಅರವಿಂದ ಲಿಂಬಾವಳಿ ಗುರುವಾರ ಉದ್ಘಾಟಿಸಿದರು. ಡಾ.ಎನ್. ಪ್ರಭುದೇವ್, ಡಾ.ಕೆ.ವಿ. ದೇವರಾಜ್ ಪಾಲ್ಗೊಂಡಿದ್ದರು.

ಬೆಂಗಳೂರು ಕೃಷಿ ವಿವಿಯ ವಿಶ್ರಾಂತ ಕುಲಪತಿ ಡಾ.ಕೆ.ವಿ. ದೇವರಾಜ್ ಮಾತನಾಡಿ, ಜೀವವೈವಿಧ್ಯದ ರಕ್ಷಣೆಗೆ ಹೆಚ್ಚು ಗಮನ ಹರಿಸಬೇಕು. ಅಂತರ್ಜಲದ ಮಟ್ಟ ಹೆಚ್ಚಿಸಲು ಕ್ರಮ ಕೈಗೊಳ್ಳಬೇಕು. ಆರೋಗ್ಯ ಸೇವೆ ಕಡೆಗೆ ಒತ್ತು ಕೊಡಬೇಕು. ಆಹಾರದಲ್ಲಿ ಸ್ವಚ್ಛತೆ ಕಾಪಾಡಬೇಕು ಎಂದರು.

ಕುಲಪತಿ ಡಾ.ಎನ್. ಪ್ರಭುದೇವ್ ಮಾತನಾಡಿ, ನೀರು ಎಲ್ಲದಕ್ಕೂ ಅಗತ್ಯ. ಈಗ ನೀರಿನ ಕೊರತೆಯಿಂದ ಎಲ್ಲೆಡೆಯೂ ಬೇಡಿಕೆ ಜಾಸ್ತಿಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ನೀರಿನ ಸಂರಕ್ಷಣೆ ಬಗ್ಗೆ ಗಮನ ಹರಿಸಲಾಗಿದೆ. ಲಕ್ಷ ವೃಕ್ಷ ಬೆಳೆಸುವ ಯೋಜನೆಗೆ ಚಾಲನೆ ಕೊಡಲಾಗಿದೆ. ಕಿರು ಜಲಾಶಯ ನಿರ್ಮಿಸುವ ಚಿಂತನೆಯೂ ಇದೆ ಎಂದು ತಿಳಿಸಿದರು.

ಕುಲಸಚಿವ ಡಾ.ಆರ್.ಎಂ. ರಂಗನಾಥ್, ಪ್ರಾಣಿಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ರಾಮಚಂದ್ರ ಮೋಹನ್, ಸಮ್ಮೇಳನದ ಸಂಘಟನೆ ಕಾರ್ಯದರ್ಶಿಗಳಾದ ಡಾ. ಎಂ.ಎಸ್. ರೆಡ್ಡಿ, ಡಾ.ಎಸ್. ರಾಮಕೃಷ್ಣ ಪಾಲ್ಗೊಂಡಿದ್ದರು.

ಪ್ರಾಣಿಶಾಸ್ತ್ರ ವಿಭಾಗ ಹೊರತಂದಿರುವ ಕೃತಿ ಹಾಗೂ ಅಂಚೆ ಲಕೋಟೆಯನ್ನು ಸಚಿವ ಅರವಿಂದ ಲಿಂಬಾವಳಿ ಬಿಡುಗಡೆ ಮಾಡಿದರು.